ಪ್ರಗತಿಯು ವಿವಿಧ ಹಂತಗಳಲ್ಲಿರುತ್ತವೆ. ಕೊಠಡಿಗಳು ಪೂರ್ಣಗೊಂಡಿರುವುದಿಲ್ಲ.

ಆ) ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 30 ಶಾಲಾ ಕೊಠಡಿಗಳ ನಿರ್ಮಾಣ ಕಾರ್ಯಕ್ಕಾಗಿ ಪ್ರತಿ ಶಾಲಾ ಕೊಠಡಿಗೆ ಶಿಕ್ಷಣ ಇಲಾಖೆಯ ವಂತಿಗೆಯಾಗಿ ರೂ. 50,000.00ಗಳಂತೆ ಬಿಡುಗಡೆ ಮಾಡಬೇಕಾಗಿದ್ದು ಅದರಂತೆ ರೂ. 30 ಕೋಟಿಗಳನ್ನು ಮೂರು ಕಂತುಗಳಲ್ಲಿ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿದೆ. ಇದಕ್ಕೆ ಜಿಲ್ಲಾ ಪಂಚಾಯತ್‌ಗಳು ತಮ್ಮ ವಂತಿಗೆಯಾಗಿ ಜೆ.ಆರ್.ವೈ ಮತ್ತು ಇತರ ಮೂಲಗಳಿಂದ ಹಣ ಸಂಗ್ರಹಿಸುವುದು, ಶಾಲಾ ಕೊಠಡಿಗಳ ನಿರ್ಮಾಣಕ್ಕೆ ನಿವೇಶನಗಳ ಆಯ್ಕೆ, ನಕ್ಷೆ ಮತ್ತು ಅಂದಾಜು ಪಟ್ಟಿ ತಯಾರಿಕೆ ಮುಂತಾದ ಕಾರಣಗಳಿಂದ ನಿರ್ಮಾಣ ಕಾರ್ಯ ಪೂರ್ತಿಗೊಳಿಸಿಲ್ಲ. ನಿರ್ಮಾಣದ ಕಾರ್ಯ ವಿವಿಧ ಹಂತಗಳಲ್ಲಿದ್ದು ಇವುಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಷಯ: ರಾಜ್ಯದಲ್ಲಿ ಪರಿಸರ ಮಾಲಿನ್ಯ ತಡೆಗಟ್ಟುವುದು.

975 (1366)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಮೂಲದಿಂದ ಪರಿಸರ ಮಾಲಿನ್ಯವಾಗುತ್ತಿದೆ.

ಆ) ಇದರ ಕಡೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಸವರಾಜ್ ನಿ. ಶಿವಣ್ಣನವರ್ (ಪರಿಸರ ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು):

ಅ) ರಾಜ್ಯದಲ್ಲಿ ಮುಖ್ಯವಾಗಿ ಕೆಳಕಂಡ ಮೂಲಗಳಿಂದ ಪರಿಸರ ಮಾಲಿನ್ಯ ಉಂಟಾಗುತ್ತಿದೆ.

- ಕೈಗಾರಿಕೆಗಳಿಂದ ವಿಸರ್ಜಿಸುವ ವ್ಯರ್ಥ ಪದಾರ್ಥಗಳು ಹಾಗು ಶಬ್ಧ ಮಾಲಿನ್ಯ.
- ಪುರಸಭೆ ಮತ್ತು ನಗರಸಭೆಗಳಲ್ಲಿ ಗೃಹಕೃತ್ಯಗಳಿಂದ ಉತ್ಪತ್ತಿಯಾಗುವ ಬಳಕೆ ನೀರು.
- ವಾಹನಗಳಿಂದ ಹೊರಹೊಮ್ಮುವ ಹೊಗೆ ಮತ್ತು ಶಬ್ದ.

- ಗೃಹಬಳಕೆ, ಹೋಟಲ್, ಕಲ್ಯಾಣಮಂದಿರ, ಆಸ್ಪತ್ರೆ ಮತ್ತು ಇತರೆ ವಾಣಿಜ್ಯ ಚಟುವಟಿಕೆಗಳಿಂದ ಉತ್ಪನ್ನವಾಗುವ ಘನ ವ್ಯರ್ಥ ಪದಾರ್ಥಗಳು.

ಆ) ಪರಿಸರ ಇಲಾಖೆಯಡಿ ಬರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲಮಾಲಿನ್ಯ (ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1974, ವಾಯು ಮಾಲಿನ್ಯ (ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1981 ಹಾಗೂ ಪರಿಸರ ಸಂರಕ್ಷಣೆ ಕಾಯ್ದೆ 1986 ಇದರ ಕೆಲವು ಅನುಬಂಧಗಳನ್ನು ಅನುಷ್ಠಾನಗೊಳಿಸುತ್ತಿದೆ. ಈ ಕಾನೂನುಗಳಡಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಉದ್ದಿಮೆಗಳು ಹಾಗೂ ವಾಹನಗಳು ವಿಸರ್ಜಿಸುವ ಕಲುಷಿತಗಳಿಗೆ ನಿರ್ದಿಷ್ಟ ಮಾನಕಗಳು ನಿಗಧಿಪಡಿಸಲಾಗಿದೆ.

2. ಈಗಾಗಲೇ ಚಾಲ್ತಿಯಲ್ಲಿರುವ ಉದ್ದಿಮೆಗಳು ವಿಸರ್ಜಿಸುವ ಕಲುಷಿತ ನೀರು, ಗಾಳಿ ಹಾಗು ಶಬ್ಧವನ್ನು ನಿಯಂತ್ರಿಸಲು ಮಾಲಿನ್ಯ ನಿಯಂತ್ರಣ ಮಂಡಳಿ ಸೂಕ್ತ ಸಂಸ್ಕರಣ ಘಟಕಗಳನ್ನು ಅನುಮೋದಿಸಿ ಅವುಗಳು ಅನುಷ್ಠಾನಗೊಳ್ಳುವಂತೆ ಕ್ರಮ ಕೈಗೊಳ್ಳುತ್ತಿದೆ.

3. ಸಂಸ್ಕರಣ ಘಟಕಗಳ ಅನುಷ್ಠಾನಗೊಂಡ ಬಳಿಕ ಅವು ಸಮರ್ಪಕವಾಗಿ ಕಾರ್ಯನಿರ್ವಹಿಸುವ ಬಗ್ಗೆ ಕಾಲ ಕ್ರಮವಾಗಿ ವಿವಿಧ ಮಾದರಿಗಳು ಸಂಗ್ರಹಿಸಿ ವಿಶ್ಲೇಷಿಸಿ ಸಂಸ್ಕರಣ ಘಟಕಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುವ ಬಗ್ಗೆ ನಿಗಾ ವಹಿಸಿರುತ್ತಾರೆ.

4. ಮಂಡಳಿ ನಿಗಧಿಪಡಿಸಿದ ಮಾನಕಗಳು ಮತ್ತು ಶರತ್ತುಗಳನ್ನು ಹಾಗು ಮೇಲೆ ಉಲ್ಲೇಖಿಸಿರುವ ಕಾನೂನುಗಳನ್ನು ಉಲ್ಲಂಘನೆ ಮಾಡಿದ ಉದ್ದಿಮೆಯ ವಿರುದ್ಧ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡುತ್ತಿದೆ.

5. ವಾಹನಗಳಿಂದ ವಿಸರ್ಜಿಸುವ ಕಲುಷಿತ ಮತ್ತು ಶಬ್ದಕ್ಕೆ ಮಾನಕಗಳ ನಿಗದಿಪಡಿಸಲಾಗಿದೆ. ಇವುಗಳ ನಿಯಂತ್ರಣ ಜವಾಬ್ದಾರಿಯನ್ನು ಸಾರಿಗೆ ಇಲಾಖೆ ಮೂಲಕ ನಿರ್ವಹಿಸಲಾಗುತ್ತಿದೆ.

6. ನಗರ ಸಭೆ ಹಾಗೂ ಪುರಸಭೆಗಳಿಂದ ಬರುವ ಕಲುಷಿತ ನೀರಿಗೆ ಮಾನಕಗಳು ನಿಗಧಿಪಡಿಸಲಾಗಿದೆ. ಪ್ರತಿ ಪುರಸಭೆ ಹಾಗು ನಗರಸಭೆ ಈ ಮಾನಕಗಳಿಗೆ ಸರಿ ಹೊಂದುವಂತೆ ತನ್ನ ಕಲುಷಿತ ನೀರು ಶುದ್ಧೀಕರಿಸಿ ಹೊರಬಿಡಬೇಕಾಗಿದೆ. ಈ ದಿಕ್ಕಿನಲ್ಲಿ ಸಾಧಿಸಿದ ಪ್ರಗತಿ ತೃಪ್ತಿಕರವಾಗಿಲ್ಲ.

7. ನದಿ ತೀರದ ಮೇಲೆ ನೆಲೆಸಿರುವ 8 ಪಟ್ಟಣಗಳಿಗೆ ರಾಷ್ಟ್ರೀಯ ನದಿ ಸಂರಕ್ಷಣಾ ಯೋಜನೆಯಡಿ ವ್ಯಾಪಕವಾದ ಯೋಜನೆ ಕೈಗೆತ್ತಿಕೊಳ್ಳಲಾಗಿದ್ದು, ಈ ಕೆಲಸಗಳು ಭರದಿಂದ ಸಾಗುತ್ತಿದೆ. ಇವು ಪೂರ್ಣವಾದಲ್ಲಿ ಈ 8 ಪಟ್ಟಣಗಳು ಗೃಹ ಬಳಕೆಯ, ಕಲುಷಿತ ನೀರು, ಶುದ್ಧೀಕರಿಸಿದ ಮೇಲೆ ವಿಸರ್ಜಿಸಲಾಗುವುದು.

8. ಹೊಸ ಉದ್ದಿಮೆಗಳು ಹಾಗು ಬಡಾವಣೆಗಳು ಪ್ರಾರಂಭವಾಗುವ ಮುನ್ನವೆ ಅವುಗಳು ಅಳವಡಿಸಬೇಕಾದ ಮಾಲಿನ್ಯ ಕ್ರಮಗಳು ಮಾಲಿನ್ಯ ನಿಯಂತ್ರಣ ಮಂಡಳಿ ಪೂರ್ವಭಾವಿಯಾಗಿ ಪರಿಶೀಲಿಸಿ, ಅವುಗಳ ಸಂಪರ್ಕತೆ ಪರಿಶೀಲಿಸಿ ಅಂತಹ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳಲು ತನ್ನ ನಿರಪೇಕ್ಷಣ ಪತ್ರವನ್ನು ನೀಡಿದ ಮೇಲೆಯೇ 50 ಕೋಟಿಗಳಿಗೆ ಮೀರಿದ ಯೋಜನೆಗಳಿಗೆ ಕೇಂದ್ರ ಪರಿಸರ ಇಲಾಖೆ ಪರಿಸರ ವಿಮೋಚನಾ ಪತ್ರ ನೀಡುತ್ತಿದೆ. 50 ಕೋಟಿಗಿಂತ ಕಡಿಮೆಯ ಯೋಜನೆಗಳಿಗೆ ರಾಜ್ಯ ಪರಿಸರ ಇಲಾಖೆ ಅಂತಹ ಪರಿಸರ ವಿಮೋಚನಾ ಪತ್ರವನ್ನು ನೀಡುತ್ತಿದೆ. ಈ ರೀತಿ ಪರವಾನಗಿ ನೀಡುವ ಮೊದಲು ಯೋಜನೆಗಳಿಗೆ ಪರಿಸರ ಆಘಾತ ಅಧ್ಯಯನ, ಆಘಾತಗಳನ್ನು ಬಗೆಹರಿಸುವ ಕ್ರಮಗಳು ಮತ್ತು ಸಾರ್ವಜನಿಕ ವಿಚಾರಣೆ ನಡೆಸಿ ಪರಿಸರ ವಿಮೋಚನಾ ಪತ್ರಗಳನ್ನು ನೀಡುವುದನ್ನು ಕಡ್ಡಾಯ ಮಾಡಲಾಗಿದ್ದು, ಅವುಗಳನ್ನು ಪಾಲಿಸಲಾಗುತ್ತಿದೆ.

9. ಅಪಘಾತಗಳು ಸಂಭವಿಸಿ ಅನೀರಿಕ್ಷಿತ ಪರಿಸರ ಮಾಲಿನ್ಯ ಉಂಟಾದಲ್ಲಿ ಪರಿಸರ ಸಂರಕ್ಷಣಾ ಕಾಯ್ದೆಯಡಿ ಅಂತಹ ಉದ್ದಿಮೆಗಳನ್ನು ಕೂಡಲೇ ಸ್ಥಗಿತಗೊಳಿಸಿ ಪರಿಸ್ಥಿತಿಯು ಹತೋಟಿಗೆ ತಂದ ಮೇಲೆ ಅಪಘಾತಕ್ಕೆ ಕಾರಣಗಳನ್ನು ತಿಳಿದು ಅವುಗಳ ನಿವಾರಣೆಗೆ ಕ್ರಮ ಜರುಗಿಸಿದ ಮೇಲೆ ಅಂತಹ ಉದ್ದಿಮೆಗಳನ್ನು ಪುನಃ ಚಾಲನೆಯಲ್ಲಿ ತರಲು ಕ್ರಮ ಜರುಗಿಸಲಾಗುತ್ತಿದೆ. ಪರಿಸರ ಹಾನಿ ಆದಲ್ಲಿ ಪರಿಹಾರ ಹಣವನ್ನು ಸಹ ಉದ್ದಿಮೆ ವತಿಯಿಂದ ವಸೂಲು ಮಾಡಲಾಗುತ್ತಿದೆ. ಹಾಗು ಅಪಘಾತದಲ್ಲಿ ನೊಂದ ಕುಟುಂಬದವರಿಗೆ ಸಂಬಂಧಪಟ್ಟ ಕಾನೂನುಗಳಡಿ ಪರಿಹಾರ ಹಣವನ್ನು ಸಹ ನೀಡಲಾಗುತ್ತಿದೆ.

10. ಉದ್ದಿಮೆ ಹಾಗು ಗೃಹ ಬಳಕೆ ವಿಸರ್ಜನೆಗಳಿಂದ ಕಲುಷಿತಗೊಳ್ಳ ಬಹುದಾದ ನೀರಿನ ಸಂಪನ್ಮೂಲಗಳ ಗುಣಮಟ್ಟವನ್ನು ಪ್ರತಿ ತಿಂಗಳು ಮಾಪನ ಮಾಡಿ ವಿವಿಧ ಭಾಗದ ನದಿಗಳ ನೀರಿನ ಬಳಕೆಯ ಆಧಾರದ ಮೇಲೆ ನದಿಗಳನ್ನು ವಿಂಗಡಿಸಲಾಗುತ್ತಿದೆ.

11. ರಾಜ್ಯದ ವಿವಿಧ ಪ್ರದೇಶದಲ್ಲಿ ಗಾಳಿಯ ಗುಣಮಟ್ಟವನ್ನು ತಿಳಿಯಲು ಅಂಬಿಯೆಂಟ್ ಮಾನಿಟರಿಂಗ್ ಸ್ಟೇಷನ್ ಟ್ಔವರ್‌ಗಳನ್ನು ಸ್ಥಾಪಿಸಿ ಆ ಪ್ರದೇಶದ ಗುಣಮಟ್ಟವನ್ನು ಮಾಪನ ಮಾಡಲಾಗುತ್ತಿದೆ.

12. ವಿವಿಧ ಕಲುಷಿತಗಳನ್ನು ವಿಶ್ಲೇಷಿಸಲು ಮಾಲಿನ್ಯ ನಿಯಂತ್ರಣ ಮಂಡಳಿ ತನ್ನ ಕೇಂದ್ರ ಪ್ರಯೋಗ ಶಾಲೆ ಮತ್ತು ಇತರ 4 ಪ್ರದೇಶಗಳಲ್ಲಿ ಪ್ರಾದೇಶಿಕ ಪ್ರಯೋಗ ಶಾಲೆಗಳನ್ನು ಸ್ಥಾಪಿಸಿದೆ ಹಾಗು ಇದರ ಜೊತೆಗೆ ರಾಜ್ಯದಲ್ಲಿ ಹಲವಾರು ಪ್ರಯೋಗ ಶಾಲೆಗಳನ್ನು ನೊಂದಾಯಿಸಿದೆ.

13. ವಾಹನಗಳಿಂದ ಹೊರಸೂಸುವ ಕಲುಷಿತಗಳನ್ನು ಮಾಪನ ಮಾಡಲು ಮಂಡಳಿಯು ಉಪಕರಣಗಳನ್ನು ಖರೀದಿಸಿ ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಟಿ.ಎಸ್ ಸಂಸ್ಥೆಗಳಿಗೆ ನೀಡಿದೆ.

14. ವಾಹನಗಳಿಂದ ಆಗುವ ಮಾಲಿನ್ಯವನ್ನು ಮಾಪನ ಮಾಡಲು ಸಾರಿಗೆ ಇಲಾಖೆ ರಾಜ್ಯಾದ್ಯಂತ ವಿಶ್ಲೇಷಣಾ ಸಂಸ್ಥೆಗಳನ್ನು ನೊಂದಾಯಿಸಿದೆ.

15. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಮೂಲಕ ಸರಬರಾಜು ಮಾಡಲಾಗುತ್ತಿರುವ ಇಂಧನದ ಗುಣಮಟ್ಟವನ್ನು ಕಾಲಕ್ರಮೇಣ ಪರಿಶೀಲಿಸಿ ಗುಣಮಟ್ಟವನ್ನು ಉಲ್ಲಂಘಿಸಿದ ಪೆಟ್ರೋಲ್ ಬಂಕ್‌ಗಳಿಗೆ ಕಾನೂನಿನನ್ವಯ ಕ್ರಮ ಜರುಗಿಸಲಾಗುತ್ತಿದೆ.

ವಿಷಯ: ಸರ್ಕಾರಿ ಹಾಗೂ ಖಾಸಗೀ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ.

976 (1364)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಈ ಕಾಲೇಜುಗಳ ಪೈಕಿ ಸರ್ಕಾರಿ ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? ಹಾಗೂ ಖಾಸಗಿ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ